


ನಾನು ಈಗ ಹೇಳ ಹೊರಟಿರುವ ಪ್ರಕರಣವು ಕರಮಚಂದನು ತಂಗರಾಜುವಿನ ಕುತೂಹಲಕಾರಿಯಾದ ಒಡೆದ ಹೂದಾನಿಯ ರಹಸ್ಯವನ್ನು ಭೇದಿಸಿದ ಕೆಲದಿನಗಳಲ್ಲೇ ಘಟಿಸಿದ್ದು. ಮೇ ತಿಂಗಳಿನ ಬಿರುಸಾದ ಬಿಸಿಲಿನ ದಿನಗಳವು.

ಭಾನುವಾರವಾದ್ದರಿಂದ ಕಚೇರಿಯ ಕೆಲಸಗಳ ಒತ್ತಡವಿರಲಿಲ್ಲ. ನಾನು ಹಳೆಯ ಕಡತಗಳ ವಿಲೇವಾರಿ ಮಾಡುತ್ತಿದ್ದೆ. ಕರಮಚಂದ ಗಣಕಯಂತ್ರದಲ್ಲಿ ಮುಖ ಹುದುಗಿಸಿದ್ದ. ಸುಮಾರು ಹತ್ತೂವರೆಯ ಸಮಯವಿರಬಹುದು. ಯಾರೋ ಮೆಟ್ಟಿಲು ಏರಿ ಬರುವ ಸಪ್ಪಳ ಕೇಳಿ ಬಂದ ಕೆಲಕ್ಷಣಗಳಲ್ಲೇ ವ್ಯಕ್ತಿಯೊಬ್ಬ ಮೆಲ್ಲನೆ ಕದ ತಟ್ಟಿ, ಒಳಗಡಿಯಿರಿಸಿದ. ಸುಮಾರು ಅರವತ್ತರ ಆಸುಪಾಸಿನಲ್ಲಿರುವ ಆಸಾಮಿ. ಬೆವರು ಒರೆಸಿಕೊಳ್ಳುತ್ತಾ ಆತ ನಮ್ಮನ್ನು ಕಂಡು ವಂದಿಸಿದ. ಕುರ್ಚಿಯಲ್ಲಿ ಆಸೀನನಾಗಿ ತನ್ನನ್ನು ತಂಬುಕತ್ತೀರ ಹೊನ್ನರಾಜು ಎಂದು ಪರಿಚಯಿಸಿಕೊಂಡ ಆತ ಹೇಳಿದ,

“ನಿಮ್ಮ ಬಗ್ಗೆ ಬಹಳ ಕೇಳಿದ್ದೀನಿ. ಎಂತಹ ಸಮಸ್ಯೆನೂ ಪರಿಹರಿಸ್ತೀರಿ ಅಂತ ಇಲ್ಲಿಗೆ ಬಂದೆ.”

“ಹಾಗೇನಿಲ್ಲ ಹೊನ್ನರಾಜು, ನೀವು ನೋಡುವಂತಹದನ್ನೇ ನಾನೂ ನೋಡ್ತೀನಿ. ನೀವು ಗಮನಿಸಿರೋದಿಲ್ಲ, ಅಷ್ಟೇ. ಉದಾಹರಣೆಗೆ, ನೀವು ಈ ವಯಸ್ಸಲ್ಲೂ ತೋಟದಲ್ಲಿ ಕೆಲ್ಸ ಮಾಡ್ತಿರೋದು ಅಭಿನಂದನೀಯ. ನೀವು ಕುಟ್ಟದಿಂದ ಬಂದಿರಿ ಅಂತ ಧಾರಾಳವಾಗಿ ಹೇಳಬಹುದು. ಜೊತೆಗೆ ನೀವು ತುಸು ಗಡಿಬಿಡಿಯಿಂದಲೇ ಬಸ್ಸು ಹತ್ತಿದ್ದೀರಿ ಅಂತ ಅನಿಸುತ್ತೆ.”

ಕರಮಚಂದನ ಊಹನೆಗಳು ನನಗೆ ಆಶ್ಚರ್ಯಕರವಾಗಿ ಕಂಡವು. ನನಗೆ ಹೊನ್ನರಾಜುವಿನಲ್ಲಿ ಅಂತಹ ಯಾವ ಸುಳಿವುಗಳು ಗೋಚರಿಸಿರಲಿಲ್ಲ.

“ಇದೇನೂ ರಾಕೆಟ್ ವಿಜ್ಞಾನ ಅಲ್ಲ, ಹೊನ್ನರಾಜು. ನೋಡಿ, ನಿಮ್ಮ ಕೈಯ ಸ್ನಾಯುಗಳು, ಮಾಂಸಖಂಡಗಳು, ನಿಮ್ಮ ನಿಲುವು ನೀವು ಸದೃಢಕಾಯರೆಂಬುದನ್ನು ತೋರಿಸುತ್ತೆ. ಈ ವಯಸ್ಸಲ್ಲೂ ಹೀಗಿರಬೇಕಾದರೆ ತೋಟದಲ್ಲಿ ಕೆಲ್ಸ ಮಾಡುವವರಿಗೆ ಮಾತ್ರ ಸಾಧ್ಯ ಅಂತ ಊಹಿಸಿದೆ. ನಿಮ್ಮ ಕೈಯಲ್ಲಿರೋದು ಕುಟ್ಟದಿಂದ ಪ್ರಕಾಶಿತವಾಗುವ ಪತ್ರಿಕೆ. ಇಲ್ಲಿ ಅದರ ಪ್ರಸಾರ ಕಡಿಮೆ. ಜೊತೆಗೆ, ಈ ಸಮಯಕ್ಕೆ ಕುಟ್ಟದಿಂದ ಸರಕಾರೀ ಬಸ್ಸೊಂದು ಬರುತ್ತದೆಂದು ನಾನು ಬಲ್ಲೆ. ಇವರೆಡರಿಂದ ನೀವು ಕುಟ್ಟದವರೆಂದು ಊಹನೆ ಮಾಡ್ದೆ. ನೋಡಿ, ನೀವು ಅಂಗಿಯ ಗುಂಡಿಗಳನ್ನು ಏರುಪೇರಾಗಿ ಹಾಕಿಕೊಂಡಿದ್ದೀರಿ. ಪ್ರಾಯಶಃ ಬಸ್ಸಿಗೆ ತಡವಾಯಿತೆಂದು ಹೊರಟಂತೆ ಕಾಣುತ್ತೆ. ನಿಮಗೆ ಮರೆವು ಇದ್ದಂತೆ ಕಾಣುತ್ತಿಲ್ಲ. ಹಾಗಾಗಿ ಗಡಿಬಿಡಿಯಲ್ಲೇ ಹೊರಟಿರೆಂದು ಅಂದುಕೊಳ್ಳಬಹುದು.”



“ನಾನೀಗ ಸರಿಯಾದ ಜಾಗಕ್ಕೆ ಬಂದಿದ್ದೀನಿ. ನೋಡಿ, ಇದೊಂದು ಸಣ್ಣ ಸಮಸ್ಯೆ. ನಮ್ಮ ಎಸ್ಟೇಟಿನಲ್ಲಿ ಒಬ್ಬ ಬಾಡಿಗೆಗೆ ಇದ್ದಾನೆ. ವಿಚಿತ್ರ ಆಸಾಮಿ. ಯಾರೊಂದಿಗೂ ಮಾತುಕತೆ ಇಲ್ಲ. ಸದಾ ಮನೆಯೊಳಗೇ ಇರುತ್ತಾನೆ. ಆತನಿಗೆ ಊಟವೂ ನಮ್ಮಲ್ಲಿಂದಲೇ ಹೋಗುವುದು. ಪೇಯಿಂಗ್ ಗೆಸ್ಟ್. ಅವ್ನ ಹೆಸರು ಸಂಪಂಗಿ ಅಂತ. ಆತನ ಬಗ್ಗೆ ಇನ್ನೇನೂ ಮಾಹಿತಿ ಇಲ್ಲ. ಆತ ತುಸು ದುಬಾರಿ ಬಾಡಿಗೆ ಕೊಡಲು ಒಪ್ಪಿದ್ದರಿಂದ ಮತ್ತು ಆರು ತಿಂಗಳ ಮುಂಗಡ ನೀಡಿದ್ದರಿಂದ, ಆತನ ಬಗ್ಗೆ ಹೆಚ್ಚು ವಿಚಾರಿಸದೇ ಆತನಿಗೆ